ಪರಿಚಯ ಆಗಿ ವರ್ಷ ಆಯ್ತಪ್ಪಾ. ಇನ್ನೂ ಗೊತ್ತಾಗಿಲ್ವಾ ನಿಮ್ಗೆ?"

"ಒಬ್ಬರ ಸ್ವಭಾವ ಅರ್ಥ ಮಾಡಿಕೊಳ್ಳೋಕೆ ಒಂದು ವರ್ಷ ಸಾಕಾ?"

"ಓ, ಬೇಕಾದಷ್ಟಾಯ್ತು. ನಿಮ್ಮನ್ನ ಅರ್ಥ ಮಾಡ್ಕೊಂಡಿಲ್ವಾ ನಾನು?"

"ಏನು ಅರ್ಥ ಮಾಡ್ಕೊಂಡಿದೀರಿ? ಬಾಯಲ್ಲಿ ಹೇಳ್ಬಿಟ್ರೆ ಸಾಕಾಗಲ್ಲ. ವಿವರಣೆ ಕೊಡ್ಬೇಕು"

"ಅದೇರೀ, ನೀವೊಂಥರಾ ಪುಕ್ಕಲು. ಒಲೆ ಮುಂದಿನ ಬೆಕ್ಕಿನ ಥರ ಬೆಚ್ಚಗಿರೋದೇ ಸುಖ ಅಂದ್ಕೊಂಡಿದೀರಿ. ತುಂತುರು ಮಳೇಲಿ ನೆನೆಯೋ ಸುಖ, ತಣ್ಣನೆಯ ಗಾಳೀಲಿ ನಡುಗೋ ಸುಖ ಗೊತ್ತೇ ಇಲ್ಲ ನಿಮ್ಗೆ."

"ಬೇಡಪ್ಪಾ, ನಾನು ಹ್ಯಾಗಿದೀನೋ ಹಾಗೆ ಸುಖವಾಗಿದೀನಿ."

"ಹಾಗಂತ ನಿಮ್ಮನ್ನ ನೀವೇ ಸಮಾಧಾನ ಮಾಡ್ಕೋತಿದೀರಿ ಅಷ್ಟೇ. 'ಹೊರಗೆ ಅಡ್ಡಾಡಿ ಬರೋಣ' ಅಂತ ಯಾರಾದ್ರೂ ಕರೆದ್ರೆ ಈ ಕ್ಷಣ ರೆಡಿ. ಹೌದಾ, ಅಲ್ವಾ?"

"ಏನೋಪ್ಪ, ನಂಗೊತ್ತಿಲ್ಲ..." ಅನ್ನುತ್ತಾ ತಲೆ ಅಲುಗಿಸಿದಳು ವೈಷ್ಣವಿ. ಲೈಟಿನ ಬೆಳಕಿನಲ್ಲಿ ಕಿವಿಯ ವಜ್ರದ ಓಲೆಗಳಂತೆ ಅವಳ ಕಣ್ಣುಗಳೂ ಫಳಕ್ಕನೆ ಮಿಂಚಿದವು. ಆ ಮಿಂಚು ಫಲ್ಗುಣನ ಕಣ್ಣುಗಳಲ್ಲಿ ಪ್ರತಿಫಲಿಸಿ ಅವನು ಪರವಶನಾದ. ಇಂತಾ ಹೊತ್ತಿನಲ್ಲಿ ಕೆನೆಮೊಸರನ್ನದೊಳಗಿನ ಕಲ್ಲು ಹರಳಿನಂತೆ ಒಳಗಿನಿಂದ ಕಿವಿಗಪ್ಪಳಿಸಿತು ಮುದುಕನ ಗೊಗ್ಗರು ದನಿ,

"ಏನ್ಮಾಡ್ತಿದೀರಿ ಅಲ್ಲಿ? ಒಳಗೆ ಬಂದು ಮಾತಾಡಿ. ನಾನೂ ಕೇಳಿಸ್ಕೋತೀನಿ."

"ನೋಡಿದ್ರಾ, ನಮ್ಮಪ್ಪನ್ನ ಮರೆತೇಬಿಟ್ಟಿದೀರಿ. ನೀವು ಬರೋದೇ ಅವರನ್ನ ನೋಡೋಕೆ ಅಂದ್ಕೊಂಡಿದಾರೆ, ಪಾಪ..." ನಕ್ಕಳು ವೈಷ್ಣವಿ.

"ಮಗೂ..." ಮತ್ತೊಮ್ಮೆ ಒಳಗಿನಿಂದ ಕರೆ ಬಂತು.

"ನಿಮಗೆ ತಮಾಷಿ ಗೊತ್ತಾ? ಎಷ್ಟೋ ಸಲ ನಮ್ಮಪ್ಪನಿಗೆ ನನ್ನ ಹೆಸರು ಮರೆತು ಹೋಗ್ಬಿಡುತ್ತೆ. ಅವರು 'ಮಗೂ...' ಅಂತ ಕರೆದ್ರೆ ನನ್ನ ಹೆಸರು ಮರೆತು ಹೋಗಿದೆ ಅಂತ ಅರ್ಥ."

"ಎಪ್ಪತ್ತೈದು ಆಯ್ತೇನೋ ಅಲ್ವಾ?" ಕೇಳಿದ ಫಲ್ಗುಣ.

"ಇನ್ನೇನು ಆದ ಹಾಗೇ, ಮುಂದಿನ ತಿಂಗಳು ಇಪ್ಪತ್ತೈದಕ್ಕೆ..."

"ಭರ್ಜರಿಯಾಗಿ ಬರ್ತ್‌ಡೇ ಪಾರ್ಟಿ ಮಾಡೋಣ, ಏನಂತೀರಿ?"

"ಮೊದಲು ಒಳಗೆ ಹೋಗೀಪ್ಪಾ. ತಟ್ಟನೆ ಕೂತಲ್ಲಿಂದ ಏಳೋಕೆ ಅಪ್ಪಂಗೆ ಆಗಲ್ಲ. ಮಂಡಿನೋವು. ಇಲ್ದಿದ್ರೆ ಅವರೇ ಇಲ್ಲಿಗೆ ಬಂದ್ಬಿಡ್ತಿದ್ರು..."

ಫಲ್ಗುಣ ವರಾಂಡ ದಾಟಿ ನಡುಮನೆಯ ಕಡೆ ಹೆಜ್ಜೆ ಹಾಕಿದ. ಅವನನ್ನು ಹಿಂಬಾಲಿಸಿದಳು ವೈಷ್ಣವಿ. ಸ್ವೀಟ್‌ಸ್ಟಾಲಿನಿಂದ ಏನನ್ನೋ ಕಟ್ಟಿಸಿ ತಂದಿದ್ದ ಕವರು ಅವನ ಕೈಲಿದ್ದುದನ್ನು ಗಮನಿಸಿದ್ದಳು ವೈಷ್ಣವಿ. 'ಏನಿವತ್ತು ವಿಶೇಷ?' ಎಂದು ಊಹಿಸಲು ಹೋಗಿ ಸೋತು ತನ್ನ ಕೌತುಕಕ್ಕೆ ಕಡಿವಾಣ ಹಾಕಿಕೊಂಡಿದ್ದಳು. ಒಳಗೆ ಹೋದ ಫಲ್ಗುಣ ಬಲಗೈಯಲ್ಲಿದ್ದ ಕವರನ್ನು ಎರಡೂ ಕೈಗಳಲ್ಲಿ ಹಿಡಿದು ರಾಯರ ಕೈಗೊಪ್ಪಿಸಿ ನಾಟಕೀಯವಾಗಿ ಎನ್ನುವಂತೆ ರಾಯರ ಪಾದಗಳ ಬಳಿ ಬಲಗೈಯನ್ನು ನೆಲಕ್ಕೆ ತಾಗಿಸಿ ಎದೆಗೊತ್ತಿಕೊಂಡ. ವೈಷ್ಣವಿ ಸೆರಗಿನ ತುದಿಯನ್ನು ಬಾಯಿಗೊತ್ತಿಕೊಂಡು ನಗು ನುಂಗಿಕೊಂಡಿದ್ದು ಫಲ್ಗುಣನ ಕಣ್ಣಿಗೆ ಬಿದ್ದೇ ಬಿತ್ತು.

"ಯಾಕ್ರೀ ನಗ್ತಿದೀರಾ?"

"ನೀವು ನಮಸ್ಕಾರ ಮಾಡಿದ ರೀತಿ ನೋಡಿ ನಗು ಬಂತಪ್ಪಾ, ಬೇಕೋ, ಬೇಡ್ವೋ ಅನ್ನೋ ಹಾಗೆ. ನಗಬಾರ್ದಾ?" ನಗಲು ದೊಡ್ಡ ಕಾರಣವೇನೂ ಬೇಕಿಲ್ಲ ಅನ್ನುವಂತೆ ಮತ್ತೊಮ್ಮೆ